ವುದು ಮುಂತಾದ ಕೆಲಸಗಳಿಗೆ ಈ ಕಛೇರಿ ಬೀಳಗಿಯಲ್ಲೇ ಮುಂದುವರಿಯುವುದು ಅತ್ಯಂತ ಸಮಂಜಸವಾದದ್ದು. ಅದು ಅಲ್ಲಿದ್ದರೆ ಮಾತ್ರ ತೀವ್ರಗತಿಯಲ್ಲಿ ಪರಿಹಾರ ಒದಗಿಸುವುದು ಸಾಧ್ಯ. ಇದ್ದ ಸೌಲಭ್ಯ ಕಸಿದುಕೊಂಡು ಮಂತ್ರೊಂದು ಕಡೆ ದೂರದ ಸ್ಥಳದಿಂದ ಅದನ್ನು ಒದಗಿಸಿಕೊಡುತ್ತೇವೆನ್ನುವುದು ಕಾರ್ಯದಕ್ಷ ಆಡಳಿತದ ಲಕ್ಷಣವಲ್ಲ. ದಕ್ಷತೆಯ ದೃಷ್ಟಿಯಿಂದ ಜನತೆಯ ಸಂಕಷ್ಟಗಳ ತೀವ್ರ ಪರಿಹಾರದ ದೃಷ್ಟಿಯಿಂದ ಹಾಗೂ ಗಂಡಾಂತರ ಸಮಯದಲ್ಲಿ ಸರ್ಕಾರ ನಮ್ಮ ಹತ್ತಿರವೇ ಇದೆಯೆಂಬ ಭರವಸೆಯ ದೃಷ್ಟಿಯಿಂದ ಈ ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಯನ್ನು ಬೀಳಗಿಯಲ್ಲೇ ಮುಂದುವರಿಸಬೇಕು. ಅದು ಮತ್ತೊಂದು ಚಳುವಳಿಗೆ ಅಶಾಂತಿಗೆ ಕಾರಣವಾಗಬಾರದೆಂದು ತಮ್ಮ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಬೀಳಗಿಯಲ್ಲಿ ಭೂ-ಸ್ವಾಧೀನ ಮಾಡತಕ್ಕ ಕೆಲಸ ಮುಕ್ತಾಯ ಹಂತದಲ್ಲಿದೆ. ಅಲ್ಲಿ ೩ ಪ್ರಕರಣಗಳು ಮಾತ್ರ ಬಾಕಿ ಉಳಿದಿವೆ. ಸಿಬ್ಬಂದಿ ಅಲ್ಲಿರುವುದರಿಂದ ಲಕ್ಷಾಂತರ ರೂಪಾಯಿಗಳ ಖರ್ಚು ಸರ್ಕಾರಕ್ಕೆ ಬರುತ್ತದೆ ಕೆಲಸ ಇಲ್ಲದೆ ಅಷ್ಟೊಂದು ಹಣವನ್ನು ಖರ್ಚು ಮಾಡುವುದು ಸೂಕ್ತವಲ್ಲ. ಆ ದೃಷ್ಟಿಯಿಂದ ಆ ಕಛೇರಿಯನ್ನು ಜಮಖಂಡಿಗೆ ಬದಲಾವಣೆ ಮಾಡತಕ್ಕಂತಹ ಅಲೋಚನೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿಯ ಜನರಿಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಆ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಏನು ಸಹಾಯ ಬೇಕೋ ಅದನ್ನು ಮಾಡುತ್ತೇವೆ.

೮) ಕೃಷ್ಣ ಎಲ್ಡಂಡೆಯ ಯೋಜನೆಯಿಂದ ಮುಳುಗಡೆಯಾಗಲಿರುವ ಕೊಲ್ಲಾರ ಗ್ರಾಮದವರಿಗೆ ಪರಿಹಾರ ಧನವನ್ನು ಮಂಜೂರು ಮಾಡುವುದರ ಬಗ್ಗೆ

ಶ್ರೀ ಕುಮಾರಗೌಡ ಎ. ಪಾಟೀಲ್ —— ಮಾನ್ಯ ಅಧ್ಯಕ್ಷರೇ, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬರುವ ಗ್ರಾಮವಾದ ಕೊಲ್ಲಾರ ಗ್ರಾಮ. ಇದು ಕೃಷ್ಣಾ ಮೇಲ್ದಂಡೆಯ ಯೋಜನೆಯಲ್ಲಿ ಮುಳುಗಡೆಯಾಗುತ್ತಿದ್ದು ಅದರಲ್ಲೂ ಬಸವನಬಾಗೆವಾಡಿ ತಾಲ್ಲೂಕಿನಲ್ಲಿ ಮುಳುಗಡೆಯಾಗುವಂತಹ ಹಳ್ಳಿಗಳಲ್ಲಿ ದೊಡ್ಡಗ್ರಾಮವಿದ್ದು. ಈಗ ಅಲ್ಲಿಯ ಜನ ಮಾನ್ಯ ಮುಖ್ಯ ಮಂತ್ರಿಗಳಿಗೆ, ಲೋಕೋಪಯೋಗಿ ಖಾತೆ ಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ಬೇಗನೆ ಮುಳುಗಡೆ ಆಗುವ ಮನೆಗಳಿಗೆ ಪರಿಹಾರಧನ ಮಂಜೂರು ಮಾಡಲು ವಿನಂತಿಸಿಕೊಂಡಿದ್ದಾರೆ. ಇಲ್ಲಿಯವರೆಗೆ ಯಾವುದೇ ವ್ಯವಸ್ಥೆ ಆಗಿಲ್ಲ. ಆದ್ದರಿಂದ ಅಲ್ಲಿಯ ಜನರು ೪-೫ ವರ್ಷ ಬರಗಾಲದಿಂದ ಬಳಲುತ್ತಿದ್ದು ಅವರ ಮನೆಗಳ ಮೇಲೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದು ಅದರಬಡ್ಡಿ ೨ ಪಟ್ಟು ೩ ಪಟ್ಟು ಹೆಚ್ಚಾಗಿದೆ. ಆದರ ಸಲುವಾಗಿ ೯-೯-೧೯೮೭ನೇ ದಿವಸ ಕೊಲ್ಲಾರ ಗ್ರಾಮದಿಂದ ೧೫೦ ಜನ ಬಂದಿದ್ದಾರೆ. ಅದರ ಬಗ್ಗೆ ಬೇಗನೆ ಹಣ ಮಂಜೂರು ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಈ ವಿಷಯವನ್ನು ಮಾನವೀಯತೆ ದೃಷ್ಟಿಯಿಂದ ನೋಡಿ ಬೇಗನೆ ಹಣ ಮಂಜೂರು ಮಾಡಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೊಲ್ಲಾರ ಗ್ರಾಮದ ಜನರು ಮತ್ತು ಆ ಕ್ಷೇತ್ರವನ್ನು ಪ್ರತಿನಿಧಿಸುವಂತಹ ಶಾಸಕರಾದ ಶ್ರೀಮಾನ್ ಕುಮಾರಗೌಡ ಎ. ಪಾಟೀಲ್‌ರವರು ನಿನ್ನೆ ನನ್ನನ್ನು ಭೇಟಿಯಾಗಿದ್ದಾರೆ. ಅವರ ಬೇಡಿಕೆಯ ಬಗ್ಗೆ ಸಹಾನುಭೂತಿ ಇದೆ. ಆದಷ್ಟು ಬೇಗ ಸಹಾಯ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೯) ಕರಾವಳಿಯ ಮೀನುಗಾರರ ಸಂಕಷ್ಟವನ್ನು ನೀಗಿಸಲು ಕನಿಷ್ಟ ಅವಶ್ಯಕತೆಗಳನ್ನು ಪೂರೈಸುವುದರ ಬಗ್ಗೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ.— ಅಧ್ಯಕ್ಷರೇ, ಕರ್ನಾಟಕದ ಕರಾವಳಿಯ ಮೀನುಗಾರರ ಸಂಕಷ್ಟದ ಕುರಿತು ಬೇಡಿಕೆಗಳು ಸರ್ಕಾರದ ಮುಂದೆ ಕಳೆದ ಕೆಲವು ವರ್ಷಗಳಿಂದ ಸಲ್ಲುತ್ತಲೇ ಇವೆ, ಮಾನ್ಯ ಮಂತ್ರಿಗಳಿಂದ ಆಶ್ವಾಸನೆಗಳು ಬರುತ್ತಲೇ ಇವೆ. ಬಡ ಮೀನುಗಾರರ ಪರಿಸ್ಥಿತಿ ಮಾತ್ರ ಅಧೋಗತಿಗೆ ಹೋಗುತ್ತಲೇ ಇದೆ. ಬಡ ಮೀನುಗಾರರಿಗೆ ಮನೆ ನಿವೇಶನ ಇಲ್ಲ, ಸ್ವಂತ ಮನೆಯಂತೂ ಇಲ್ಲವೇ ಇಲ್ಲ.

ಕುಡಿಯುವ ನೀರಿನ ಬಾವಿ ಇಲ್ಲದೆ ಉಪ್ಪು ನೀರೇ ಅವರಿಗೆ ಆಹಾರ. ಶೌಚಾಗೃಹ ವ್ಯವಸ್ಥೆಯಿಲ್ಲದೆ ಪ್ರಕೃತಿಗೇ ಶರಣಾಗಬೇಕಾದ ಪರಿಸ್ಥಿತಿ. ಮಿನು ಒಣಗಿಸಲು ಸರಿಯಾದ ಜಾಗದ ವ್ಯವಸ್ಥೆ ಇಲ್ಲ. ಸಂಯ್ಕವಸ್ಥಿತ ಮಾರುಕಟ್ಟೆ ಸೌಲಭ್ಯ ಇಲ್ಲದೆ, ಮಧ್ಯವರ್ತಿಗಳ ಶೋಷಣೆಗೆ ಬಲಿಯಾಗಬೇಕಾದ ದುರಂತ ಎದುರಿಸಬೇಕಾಗಿದೆ. ದೋಣಿ ತಂಗುದಾಣಗಳಿಲ್ಲದೆ, ಮಳೆ – ಬಿಸಿಲಿಗೆ ತಮ್ಮ ಸರ್ವಸ್ವವನ್ನೇ ಒಡ್ಡ ಬೇಕಾದ ಅನಿವಾರ್ಯ ಪರಿಸ್ಥಿತಿ. ಸಾಂಪ್ರದಾಯಿಕ ಮಿನುಗಾರರ ಕುರಿತು ಕಾಳಜಿ ಇಲ್ಲದೆ ಆ ವ್ಯವಸ್ಥೆ ಯಲ್ಲಿರುವವರು ಹತಾಶರಾಗಿರುವ ಪರಿಸ್ಥಿತಿ. ಮನೆ ನಿವೇಶನ, ಸ್ವಂತ ಮನೆ, ಕುಡಿಯುವ ನೀರಿನ ತೆರೆದ ಬಾವಿಗಳು, ಶೌಚಾಗೃಹ ಮಾರುಕಟ್ಟೆ ವ್ಯವಸ್ಥೆ, ಒಣಗುತಾಣ, ತಂಗುದಾಣ, ಸಂಪರ್ಕರಸ್ತೆ ವ್ಯವಸ್ಥೆ, ಸಾಂಪ್ರದಾಯಿಕ ದೋಣಿಗಳಿಗೆ ಔಟ್ ಬೋರ್ಡ್ ಇಂಜಿನ್ ಅಳವಡಿಸಲು ವ್ಯಾಪಕವಾದ ಯೋಜನೆ – ಮಿನುಗಾರರಿಗಾಗಿ ಇಷ್ಟಾದರೂ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಬೇಕಾಗಿ ಸದನದ ಮುಖೇನ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಅಧ್ಯಕ್ಷರೇ, ಮಾನ್ಯ ಸದಸ್ಯರ ಹೇಳಿಕೆಯನ್ನು ಪರಿಶೀಲಿಸಿದಾಗ ಇದಂ ಕರಾವಳಿ ಮಿನುಗಾರರ ವಿವಿಧ ಸಮಸ್ಯೆಗಳನ್ನು ಕುರಿತಾಗಿದ್ದು, ಈ ಬಗ್ಗೆ ಹಲವಾರು ಬಾರಿ ಪಂಚವಿ ಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದರೂ ಕೂಡ ಸರ್ಕಾರವು ಏನು ಪರಿಣಾಮಕಾರಿ ಕ್ರಮವನ್ನು ಕೈಗೊಂಡಿ ರುವುದಿಲ್ಲವೆಂಬ ಭಾವನೆಯನ್ನು ನೀಡುತ್ತದೆ. ರಾಜ್ಯದ ಕರಾವಳಿಯಲ್ಲಿ ಪಂಚವಾರ್ಷಿಕ ಯೋಜನೆಗಳಲ್ಲಿ ಕಾರ್ಯಗತಗೊಳಿಸಲಾಗಿರುವ ಹಲವಾರು ಯೋಜನೆಗಳಿಂದ ಬಹುತೇಕ ಮಿನುಗಾರರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಸುಧಾರಿಸಿದ್ದು ಇದು ರಾಜ್ಯಕ್ಕೆ ಹೆಮ್ಮೆಯ ಸಂಗತಿ. ಈ ಯೋಜನೆಗಳ ಆನುಷ್ಠಾನದಿಂದಾಗಿ ಸಂಮಾರು ಶೇಕಡ ೮೦ರಷ್ಟು ಸಾಂಪ್ರದಾಯಿಕ ಮಿನುಗಾರರು ಯಾಂತ್ರಿಕ ಮಿನುಗಾರಿಕೆಯಲ್ಲಿ ತೊಡಗಿದ್ದಾರೆ. ಮಿನು ಮಾರಾಟವನ್ನು ಸಂಘಟಿಸಲು ಜಿಲ್ಲಾ ಮಟ್ಟದ ಮಿನು ಮಾರಾಟ ಮಹಾ ಮಂಡಲಿಗೆ, ಆಯ್ಕೆಗೊಂಡ ಪ್ರಾಥಮಿಕ ಮಿನುಗಾರರ ಸಹಕಾರ ಸಂಘಗಳಿಗೆ ಮತ್ತು ಕರ್ನಾಟಕ ಮಿನುಗಾರಿಕೆ ಅಭಿವೃದ್ಧಿ ನಿಗಮಕ್ಕೆ ಸರ್ಕಾರವು ಗಣನೀಯ ಪಾಲು ಬಂಡವಾಳ ನೀಡಿದೆ. ಮಿನುಗಾರರೇ ಈ ಸಹಕಾರಿ ಸಂಸ್ಥೆಗಳನ್ನು ಸುಧಾರಣೆಗೊಳಿಸಿ ಮಿನು ಮಾರಾಟದಲ್ಲಿ ಮಧ್ಯವರ್ತಿಗಳ ಹಿಡಿತವನ್ನು ನಿವಾರಿಸಬೇಕಾಗಿರುವುದು. ಇದಲ್ಲದೆ ಮಿನುಮಾರುಕಟ್ಟೆ ಕಟ್ಟುವ ಯೋಜನೆಯ ಹೆಚ್ಚಿನ ಲಾಭವನ್ನು ಕರಾವಳಿ ಜಿಲ್ಲೆಗಳೇ ಪಡೆದಿದ್ದು ಇದುವರೆವಿಗೂ ೨೭ ಮಿನು ಮಾರುಕಟ್ಟೆ ಕಟ್ಟಲು ಸ್ಥಳೀಯ ಸಂಸ್ಥೆಗಳಿಗೆ ಸಾಲ ಮತ್ತು ಸಹಾಯ ಧನವನ್ನು ನೀಡಲಾಗಿದೆ. ಮಿನುಗಾರಿಕೆ ಬಂದರುಗಳ ಬಗ್ಗೆ ಹೇಳಬೇಕಾದರೆ ಈಗಾಗಲೇ ಕಾರವಾರ, ತದಡಿ, ಹೊನ್ನಾವರ ಮತ್ತು ಮಂಲ್ಪೆ ಈ ಸ್ಥಳಗಳಲ್ಲಿ ದೊಡ್ಡ ಪ್ರಮಾಣದ ಮಿನುಗಾರಿಕಾ ಬಂದರುಗಳನ್ನು ನಿರ್ಮಿಸಲಾಗಿದೆ. ಮಂಗಳೂರಿನ ಹಳೆ ಬಂದರಿನ ಪ್ರದೇಶದಲ್ಲಿ ನೂತನವಾದ ಮಿನುಗಾರಿಕಾ ಬಂದರನ್ನು ನಿರ್ಮಿಸಲಾಗುತ್ತಿದೆ. ಇದಲ್ಲದೆ ಮಿನುಗಾರಿಕೆ ಕೇಂದ್ರಗಳನ್ನು ಹೆದ್ದಾರಿಗಳಿಗೆ ಜೋಡಿಸುವ ಸಂಪರ್ಕ ರಸ್ತೆಗಳನ್ನು ನಿರ್ಮಿಸುವಲ್ಲಿ ಕರ್ನಾಟಕವು ಪ್ರಪ್ರಥಮ ರಾಜ್ಯವಾಗಿದೆ. ಇದುವರೆವಿಗೂ ೧೫೮ ಕಿ.ಮೀ. ಉದ್ದದ ಇಂಥ ರಸ್ತೆಗಳನ್ನು ನಿರ್ಮಿಸಲಾಗಿದೆ.

ಈ ಮೇಲ್ಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಸರ್ಕಾರವು ಮಿನುಗಾರರ ಸಮುದಾಯಕ್ಕೆ ಹಾಗೂ ಮಿನು ಕೈಗಾರಿಕೆಗೆ ಸಾಕಷ್ಟು ಉತ್ತೇಜನ ನೀಡಿರುವುದು ವೇದ್ಯವಾಗುತ್ತದೆ. ಆದರೆ ಇನ್ನೂ ಮಾಡಬೇಕಾಗಿರುವುದು ಸಾಕಷ್ಟು ಇದ್ದು, ಇದರಲ್ಲಿ ಪ್ರಮುಖವಾಗಿ ಕರಾವಳಿ ವಂತ್ತು ಒಳನಾಡು ಮಿನುಗಾರರಿಗೆ ವಸತಿ ಸೌಕರ್ಯ ಒದಗಿಸಿಕೊಡಬೇಕಾಗಿರುವುದು. ಈ ನಿಟ್ಟಿನಲ್ಲಿ ತದಡಿ ಯಲ್ಲಿ ಕೈಗೊಳ್ಳಲಾಗಿರುವ ಭಾರತ ಡೆನ್ಮಾರ್ಕ್ ಯೋಜನೆಯಲ್ಲಿ ವಸತಿ ಸೌಕರ್ಯ ನಿರ್ಮಿಸಲು ಕಾರ್ಯ ಕ್ರಮ ರೂಪಿಸಲಾಗಿದೆ. ಇದಲ್ಲದೆ ಹುಡ್ಕೋ ನೆರವಿನಿಂದ ಮಿನುಗಾರರಿಗೆ ವಸತಿ ನಿರ್ಮಾಣಕ್ಕಾಗಿ ಒಂದು ಯೋಜನೆಯನ್ನು ರೂಪಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ರೂ. ೨೭೫೫.೪೧ ಲಕ್ಷಗಳ ವೆಚ್ಚದಲ್ಲಿ ಕಾರ್ಯಗತಗೊಳಿಸಲು ಯೋಜಿಸಲಾಗಿದ್ದು, ಇದಕ್ಕೆ ಡೆನ್ಮಾರ್ಕ್‌ನ ಆರ್ಥಿಕ ನೆರವನ್ನು ಕೋರಲಾಗುವುದು. ಈ ಯೋಜನೆಯಲ್ಲಿ ಮಿನುಗಾರರಿಗಾಗಿ ೩೯೫.೫೦ ಲಕ್ಷ ರೂ.ಗಳ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಇದರಲ್ಲಿ ಪ್ರಮುಖವಾಗಿ ಗಂಟೊಳ್ಳಿ, ಅಳಿವೆಗದ್ದೆ, ಹಂಗಾರಕಟ್ಟೆ, ಕುಂದಾಪುರ – ಕೋಡಿ ಮಂತ್ತು ಸಸಿಹಿತ್ಲು ಈ ಸ್ಥಳಗಳಲ್ಲಿ ಮಿನು ಇಳಿ ಕಟ್ಟೆಗಳನ್ನು ನಿರ್ಮಿಸಲಾಗುವುದು. ಮಿನು ಒಣಗಿಸುವ ಸ್ಥಳಗಳ ನಿರ್ಮಾಣ, ಸಂಪರ್ಕ ರಸ್ತೆಗಳ ನಿರ್ಮಾಣ, ಸಮುದಾಯ ಭವನ ಇನ್ನೇ ಮ[illegible] ಹಮ್ಮಿಕೊಳ್ಳಲಾಗಿದೆ. ನಾಡ

ದೋಣಿಗಳನ್ನು ಯಾಂತ್ರೀಕರಣಕ್ಕೆ ಅಳವಡಿಸಲು ಕೇಂದ್ರ ಪುರಸ್ಕೃತ ಯೋಜನೆಯನ್ನು ೧೯೮೭–೮೮ನೇ ಸಾಲಿನಿಂದಲೇ ಜಾರಿಗೊಳಿಸಲು ಉದ್ದೇಶಿಸಿದ್ದು, ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ೨೦೦ ಔಟ್ ಬೋರ್ಡ್ ಇಂಜಿನ್‌ಗಳನ್ನು ಸಾಂಪ್ರದಾಯಿಕ ಮೀನುಗಾರರಿಗೆ ಸಹಾಯಧನ ನೀಡುವ ಮೂಲಕ ಹಿಂದಗಿಸಲು ಯೋಜಿಸಲಾಗಿದೆ.

೧೦) ಹಿರಿಯೂರಿನಿಂದ ರಾಜಧಾನಿಗೆ ಬಸ್ ಓಡಿಸುವುದು ಹಾಗೂ ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸುವುದರ ಬಗ್ಗೆ

ಶ್ರೀ ಆರ್. ರಾಮಯ್ಯ.— ಮಾನ್ಯ ಅಧ್ಯಕ್ಷರೆ, ಸರ್ಕಾರವು ಪ್ರತಿ ತಾಲ್ಲೂಕಿನಿಂದ ರಾಜಧಾನಿಗೆ ಒಂದು ಪ್ರಾರಂಭಿಕ ಬಸ್‌ನ್ನು ಓಡಿಸುವುದಾಗಿಯೂ, ಪ್ರತಿ ತಾಲ್ಲೂಕಿನ ಕೇಂದ್ರದಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸುವುದಾಗಿಯೂ ಘೋಷಿಸಿ ಆದೇಶಿಸಿದೆ. ಆದರೆ ಈ ಎರಡೂ ಕಾರ್ಯಕ್ರಮಗಳು ಹಿರಿಯೂರು ತಾಲ್ಲೂಕಿಗೆ ಹೊರತಾಗಿರುವುದು ನೋಜಿಗ. ಶಾಸಕರುಗಳ ಜಿಲ್ಲಾವಾರು ಸಮಾಲೋಚನೆ ಸಭೆಯನ್ನು ಕರೆದಿದ್ದಾಗಲೂ ಈ ಬಗ್ಗೆ ಸಚಿವರ ಗಮನಕ್ಕೆ ತಂದೂ ಸಹ ಪುಸ್ತಕದಲ್ಲಿ ಮಂದ್ರಣವಾಗಿ ಕುಳಿತಿದೆ. ಈ ನಗರದ ಮುಖೇನ ೩೫೦ಕ್ಕೂ ಹೆಚ್ಚು ಬಸ್ಸುಗಳು ಹಾದುಹೋಗುತ್ತಿದ್ದು ಪ್ರಯಾಣಿಕರಿಗೆ ವಿಶ್ರಾಂತಿ ಪಡೆಯಲಿಕ್ಕಾಗಲಿ ಉಪಹಾರ ಪಡೆಯಲಿಕ್ಕಾಗಲಿ ಸರಿಯಾದ ಸೌಕರ್ಯ ಇಲ್ಲದಿರುವುದು ವೇದಕರ. ಈ ಎರಡು ಬೇಡಿಕೆಗಳನ್ನು ತುರ್ತಾಗಿ ಪರಿಗಣಿಸಿ ಸರ್ಕಾರ ಕೂಡಲೇ ಕಾರ್ಯೋನ್ಮುಖವಾಗಲು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಶಾಸಕರಾದ ಶ್ರೀಯುತ ಆರ್. ರಾಮಯ್ಯನವರು ತಾಲ್ಲೂಕು ಕೇಂದ್ರವಾದ ಹಿರಿಯೂರು ಪಟ್ಟಣದಿಂದ ರಾಜಧಾನಿಗೆ ಪ್ರಾರಂಭಿಕ ಬಸ್ ಇಲ್ಲದಿರುವುದರ ಬಗ್ಗೆ ಮತ್ತು ಸುಮಾರು ೩೫೦ಕ್ಕಿಂತಲೂ ಹೆಚ್ಚಾಗಿ ಸಾರಿಗೆ ಸಂಸ್ಥೆಯ ವಾಹನಗಳು ಈ ಪಟ್ಟಣದ ಮೂಲಕ ಸಂಚರಿಸುತ್ತಿದ್ದಾಗ್ಯೂ ಕೂಡ ಪ್ರಯಾಣಿಕರಿಗೆ ವಿಶ್ರಾಂತಿ ಮತ್ತು ಉಪಹಾರ ಪಡೆಯಲು ಸರಿಯಾದ ಸೌಕರ್ಯ ಇಲ್ಲದಿರುವ ಬಗ್ಗೆ ಸರ್ಕಾರದ ಗಮನ ಸೆಳೆದಿರುತ್ತಾರೆ,

ಹಿರಿಯೂರು ಪಟ್ಟಣವು ಬೆಂಗಳೂರು–ಬೆಳಗಾಂ ಮಾರ್ಗದಲ್ಲಿ ಬೆಂಗಳೂರಿನಿಂದ ೧೬೦ ಕಿಲೋ ಮೀಟರ್ ದೂರದಲ್ಲಿದೆ. ಹಿರಿಯೂರು ಮೂಲಕ ಪ್ರತಿನಿತ್ಯ ನಿಗಮದ ಸುಮಾರು ೯೮ ವಾಹನಗಳು ಬೆಂಗಳೂರಿನಿಂದ ಸಂಚರಿಸುತ್ತವೆ. ದಿನದ ೨೪ ಗಂಟೆಗಳಲ್ಲಿ ರಾತ್ರಿ ೮.೩೦ ಗಂಟೆಯಿಂದ ೧೧–೩೦ ಗಂಟೆ ಹೊರತುಪಡಿಸಿ ಯಾವುದೇ ಒಂದು ಗಂಟೆ ಅವಧಿಯೊಳಗಾಗಿ ಬೆಂಗಳೂರಿಗೆ ಸಾರಿಗೆ ಸೌಲಭ್ಯ ಪಡೆಯಬಹುದಾಗಿದೆ.

ಹಿರಿಯೂರು ಪಟ್ಟಣವು ರಾಷ್ಟ್ರೀಕರಣವಾಗಿಲ್ಲದ ವಲಯದಲ್ಲಿರುತ್ತದೆ. (ರಾಷ್ಟ್ರೀಯ ಪರ್ಮಿಟ್‌ನ್ನು ಬಿಟ್ಟು) ಹಿರಿಯೂರಿನ ಸುತ್ತಮುತ್ತಲ ಪ್ರದೇಶಗಳಿಗೆ ವಾಸಿಗಿ ಮಾಲೀಕರೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿರುತ್ತಾರೆ. ಹಿರಿಯೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಸಂದರ್ಭದಲ್ಲಿ ಈಗಾಗಲೇ ವ್ಯವಹರಿಸುತ್ತಿದ್ದು ಸೂಕ್ತ ಜಮೀನು ದೊರಕಿದ ನಂತರ ಆಧುನಿಕ ಬಸ್‌ನಿಲ್ದಾಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ವಿಕಾಂತಯ್ಯನವರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಜಾಗವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಶಾಸಕರು ಸಹ ಸಹಕಾರ ಕೊಟ್ಟರೆ ಸುವ್ಯವಸ್ಥಿತವಾದ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡುತ್ತೇನೆ, ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಬಸ್‌ಸೌಕರ್ಯವನ್ನು ಅಲ್ಲಿಂದ ಒದಗಿಸಿಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ಆ ವ್ಯವಸ್ಥೆ ಇದೆ, ಇನ್ನು ಹೆಚ್ಚಿಗೆ ಬೇಕೆಂದು ಕೇಳಿದರೆ ಅದನ್ನು ಮಾಡಿಕೊಡುತ್ತೇವೆ.

೧೧) ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಿನಗೂಲಿಯಂತೆ ಕೆಲಸ ಮಾಡುತ್ತಿರುವ ಶೀಘ್ರಲಿಪಿಗಾರರನ್ನು ಖಾಯಂ ಗೊಳಿಸುವುದರ ಬಗ್ಗೆ

SMT. MUKHTARUNNISA.— Nearly 400–500 daily rated workers are working as Stenographers, Typists and Second Division Clerks from 3-4 years in the Commercial Tax Department. When they wer.